**ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ**

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

CIN NO: U40109KA2004SGC035177 | ನಿಗಮದ ಅಧಿಕೃತ ವೆಬ್‌ಸೈಟ್:www.cescmysore.org

| ದೂರವಾಣಿ ಸಂಖ್ಯೆ:08224-297504<br>ದೂರವಾಣಿ ಸಂಖ್ಯೆ:08224-268845<br>Email: aeehanur@cescmysore.org<br>ceschanur@gmail.com | ನಿಗಮ ಕಾರ್ಯಾಲಯ<br>ನಂ.29, ವಿಜಯನಗರ 2ನೇ ಹಂತ<br>ಹಿನಕಲ್, ಮೈಸೂರು-570 017. | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)<br>ರವರ ಕಛೇರಿ, ಚಾ.ವಿ.ಸ.ನಿ.ನಿ. ಉಪವಿಭಾಗ,<br>ಹನೂರು - 571439 |
|---|---|---|
| ಸಂ.ಸಕಾನಿಇಂ(ವಿ)/ಸಇ(ತಾಂ)/ಹಉವಿ/2019-20 / 894-98 | | ದಿನಾಂಕ: 30-06-19 |


# -: ಜನ ಸಂಪರ್ಕ ಸಭೆ :-

## ನಡಾವಳಿ

ದಿನಾಂಕ 21.06.2019 ರಂದು ಹನೂರು ಉಪವಿಭಾಗದಲ್ಲಿ ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕೊಳ್ಳೇಗಾಲ ವಿಭಾಗ , ಚಾವಿಸನಿನಿ ಇವರ ಅಧ್ಯಕ್ಷತೆಯಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಹನೂರು ಉಪವಿಭಾಗಕ್ಕೆ ಸಂಬಂದಿಸಿದಂತೆ ಬಂದ ದೂರುಗಳು ಹಾಗೂ ತೆಗೆದುಕೊಂಡ ಕ್ರಮಗಳು ಈ ಕೆಳಗಿನಂತಿರುತ್ತವೆ.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು**

| ಶ್ರೀಯುತರು: | ಪದನಾಮ. |
|---|---|
| 1. ಶ್ರೀ.ಟಿ.ಪ್ರದೀಪ್ | : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿಭಾಗ ಕಛೇರಿ, ಕೊಳ್ಳೇಗಾಲ. |
| 2. ಶ್ರೀ.ಎ.ಎಂ.ಶಂಕರ್ | : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಹನೂರು ಉಪವಿಭಾಗ. |
| 3. ಶ್ರೀ.ಬಿ.ರಂಗಸ್ವಾಮಿ | : ಸಹಾಯಕ ಇಂಜಿನಿಯರ್(ವಿ), ತಾಂತ್ರಿಕ ಶಾಖೆ, ಹನೂರು ಉಪವಿಭಾಗ. |
| 4. ಶ್ರೀ. ಆರ್.ಜಯರಾಮ್ | : ಪ್ರಭಾರ ಸಹಾಯಕ ಇಂಜಿನಿಯರ್(ವಿ), ಹನೂರು ಶಾಖೆ, ಹನೂರು ಉಪವಿಭಾಗ. |
| 5. ಶ್ರೀ.ಆರ್.ಭಾಸ್ಕರ್ | : ಪ್ರಭಾರ ಕಿರಿಯ ಇಂಜಿನಿಯರ್(ವಿ), ಲೊಕ್ಕನಹಳ್ಳ ಶಾಖೆ, ಹನೂರು ಉಪವಿಭಾಗ. |
| 6. ಶ್ರೀ.ಟಿ.ಸಂತೋಷ್ | : ಕಿರಿಯ ಇಂಜಿನಿಯರ್(ವಿ), ರಾಮಾಪುರ ಶಾಖೆ, ಹನೂರು ಉಪವಿಭಾಗ. |
| 7. ಶ್ರೀ.ಎನ್.ಮಹೇಶ್ | : ಪ್ರಭಾರ ಕಿರಿಯ ಇಂಜಿನಿಯರ್(ವಿ), ಕೌದಳ್ಳಿ ಶಾಖೆ, ಹನೂರು ಉಪವಿಭಾಗ. |
| 8. ಶ್ರೀ.ಬಿ.ಬಿ.ನಾಗರಾಜು | : ಪ್ರಭಾರ ಕಿರಿಯ ಇಂಜಿನಿಯರ್(ವಿ), ಮಹದೇಶ್ವರಬೆಟ್ಟ ಶಾಖೆ, ಹನೂರು ಉಪವಿಭಾಗ. |
| 9. ಶ್ರೀ.ಮಹಮ್ಮದ್ ರಿಯಾಜ್ | : ಪ್ರಭಾರ ಹಿರಿಯ ಸಹಾಯಕ, ಕಂದಾಯ ಶಾಖೆ. ಹನೂರು ಉಪವಿಭಾಗ. |

ಶ್ರೀ. ಟಿ.ಪ್ರದೀಪ್, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿಭಾಗ ಕಛೇರಿ, ಕೊಳ್ಳೇಗಾಲ ರವರು ಸಭೆಗೆ ಹಾಜರಿದ್ದ ಗ್ರಾಹಕರನ್ನು ಸ್ವಾಗತಿಸಿದರು. ನಂತರ ಗ್ರಾಹಕರು ಸಭೆಯಲ್ಲಿ ಸಲ್ಲಿಸಿದ ಅಹವಾಲುಗಳ ಬಗ್ಗೆ ಈ ಕೆಳಕಂಡಂತೆ ಚರ್ಚಿಸಿ ಸೂಕ್ತ ಮಾಹಿತಿಯನ್ನು ನೀಡಿರುತ್ತಾರೆ.

| ಕ್ರ.ಸಂ. | ಗ್ರಾಹಕರ ಹೆಸರು ಮತ್ತು ವಿಳಾಸ | ದೂರು | ಅನುಸರಣೆ |
|---|---|---|---|
| 1 | ಮಹದೇವಪ್ರಭು ಶಾಗ್ಯ 6364619464 | *ಅಕ್ರಮ-ಸಕ್ರಮ ಯೋಜನೆಯಲ್ಲಿ ಹಣ ಪಾವತಿಸಿದ್ದು ಇದುವರೆವಿಗೂ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲವೆಂದು ತಿಳಿಸಿರುತ್ತಾರೆ. | *ಸದರಿಯವರಿಗೆ ಎಲ್.ಟಿ. ಮಾರ್ಗದ ಅವಶ್ಯಕತೆ ಇದ್ದು ಅಂದಾಜು ಪಟ್ಟಿಯನ್ನು ತಯಾರಿಸಲು ಸಂಬಂಧಪಟ್ಟ ಶಾಖಾಧಿಕಾರಿಯವರಿಗೆ ಸೂಚಿಸಲಾಯಿತು. |
| 2 | ನಾಗರಾಜು ದಿನ್ನಳ್ಳಿ 9482761715 | 2008-09 ರಲ್ಲಿ ಗಂಗಾ-ಕಲ್ಯಾಣ ಯೋಜನೆಯಡಿಯಲ್ಲಿ ಬೋರ್‌ವೆಲ್ ಕೊರೆಸಲಾಗಿದ್ದು, ಇದುವರೆವಿಗೂ ಕಾಮಗಾರಿಯನ್ನು ಪೂರ್ಣಗೊಳಿಸಿರುವುದಿಲ್ಲ. | ಸದರಿಯವರ ದೂರನ್ನು ಪರಿಶೀಲಿಸಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸ.ಕಾ.ನಿ.ಇಂ(ವಿ), ಹನೂರು ರವರಿಗೆ ಸೂಚಿಸಲಾಯಿತು. |
| 3 | ಪ್ರದೀಪ್‌ಕುಮಾರ್ ಬಿನ್ ಜಯರಾಮ್, ಹನೂರು | ಪಟ್ಟಣದ ಒಳಗೆ ಮನೆಯ ಮೇಲೆ ಹಾದು ಹೋಗಿರುವ ಹೆಚ್.ಟಿ. ಮಾರ್ಗವನ್ನು ಸ್ಥಳಾಂತರಿಸಲು ಕೋರಿರುತ್ತಾರೆ. | ಸ್ಥಳ ಪರಿಶೀಲಿಸಿ IPDS ಕಾಮಗಾರಿಯ ಯೋಜನೆಯಡಿಯಲ್ಲಿ ಕಾಮಗಾರಿಯನ್ನು ನಿರ್ವಹಿಸಲು ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು. |

| | | | |
|---|---|---|---|
| 4 | ಚಿಕ್ಕತಿಮ್ಮೇಗೌಡ, ಕಳ್ಳಿದೊಡ್ಡಿ, ಮೊ.ಸಂ.9620353037 | UNIP ಯೋಜನೆಯಡಿಯಲ್ಲಿ ಕಾಮಗಾರಿ ಮುಗಿದಿದ್ದು ಟಿ.ಸಿ. ಮಾತ್ರ ಅಳವಡಿಸಿರುವುದಿಲ್ಲವೆಂದು ದೂರಿರುತ್ತಾರೆ. | ತಕ್ಷಣವೇ ಪರಿವರ್ತಕವನ್ನು ಅಳವಡಿಸಲು ಗುತ್ತಿಗೆದಾರರಿಗೆ ತಿಳಿಸಲು ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು. |
| 5 | ಬಸವರಾಜು, PACC BANK, ಹನೂರು | H1L-7906, ಆರ್.ಆರ್.ನಂ.ನಲ್ಲಿ ಬಿಲ್ಲು ವ್ಯತ್ಯಾಸವಾಗಿದ್ದು ಹಾಗೂ ವಿಳಾಸ ವ್ಯತ್ಯಾಸವಾಗಿದ್ದು ಸರಿಪಡಿಸಲು ಕೋರಿರುತ್ತಾರೆ. | ಹಿರಿಯ ಸಹಾಯಕರಿಗೆ ಕೂಡಲೇ ಸರಿಪಡಿಸಲು ಸೂಚಿಸಲಾಯಿತು. |
| 6 | ಮಲ್ಲಿಕಾರ್ಜುನ, ಚಿಕ್ಕಮಾಲಾಪುರ | ಚಿಕ್ಕಮಾಲಾಪುರ 100ಕೆವಿಎ ಟಿ.ಸಿ.ಯಲ್ಲಿ ಎಲ್.ಟಿ.ಮಾರ್ಗಗಳು ತುಂಬಾ ಜೋತು ಬಿದ್ದಿದ್ದು ಸರಿಪಡಿಸಲು ಕೋರಿರುತ್ತಾರೆ. | ಲೊಕ್ಕನಹಳ್ಳಿ ಶಾಖಾಧಿಕಾರಿಗಳಿಗೆ ಜೋತು ಬಿದ್ದ ಮಾರ್ಗಗಳನ್ನು ಸರಿಪಡಿಸಲು ತಿಳಿಸಲಾಯಿತು. |
| 7 | ಚಿನ್ನಸ್ವಾಮಿ ಬಿನ್ ಪುಟ್ಟಮಾದಯ್ಯ, ಉದ್ದನೂರು | ಎಲ್.ಟಿ. ವೈರ್ ಮನೆಯ ಮೇಲೆ ಜೋತು ಬಿದ್ದಿದ್ದು ಸರಿಪಡಿಸಲು ಕೋರಿರುತ್ತಾರೆ. | ಹನೂರು ಶಾಖಾಧಿಕಾರಿಗಳಿಗೆ ಎಲ್.ಟಿ. ಮಾರ್ಗವನ್ನು ಸರಿಪಡಿಸಲು ಸೂಚಿಸಲಾಯಿತು. |
| 8 | ಅಶ್ವಿನ್ ಬಿನ್ ರಾಮಚಂದ್ರ, ಅಲಗುಮೂಲೆ | UNIP ಯೋಜನೆಯಡಿಯಲ್ಲಿ S-8484, ಕಾರ್ಯಾದೇಶವಾಗಿದ್ದು ಇದುವರೆವಿಗೂ ಕಾಮಗಾರಿಯನ್ನು ನಿರ್ವಹಿಸಿರುವುದಿಲ್ಲ. | ಈಗಾಗಲೇ ಕಾಮಗಾರಿಗಳನ್ನು ನಿರ್ವಹಿಸಲು ಶ್ರೀ.ನಂಜುಂಡೇಶ್ವರ ಎಲೆಕ್ಟ್ರಿಕಲ್ಸ್, ರವರಿಗೆ ಅವಾರ್ಡ್ ನೀಡಲಾಗಿದ್ದು ಕಾಮಗಾರಿಯನ್ನು ಜ್ಯೇಷ್ಠತೆಯ ಆಧಾರದ ಮೇಲೆ ನಿರ್ವಹಿಸಲಾಗುವುದೆಂದು ತಿಳಿಸಲಾಯಿತು. |
| 9 | ಶ್ರೀನಿವಾಸ ಬಿನ್ ನಾಗಪ್ಪ, ನಾಗಣ್ಣನಗರ | ವಾಸದ ಮನೆಯ ಮೇಲೆ ವಿದ್ಯುತ್ ತಂತಿ ಹಾದು ಹೋಗಿದ್ದು ಸ್ಥಳಾಂತರಿಸಲು ಕೋರಿರುತ್ತಾರೆ. | ರಾಮಾಪುರ ಶಾಖಾಧಿಕಾರಿಗಳಿಗೆ ತ್ವರಿತವಾಗಿ ಸ್ಥಳ ಪರಿಶೀಲಿಸಿ ಇಲಾಖಾ ನಿಯಮಾನುಸಾರ ಕ್ರಮವಹಿಸಲು ಸೂಚಿಸಲಾಯಿತು. |
| 10 | ಮುದ್ದಪ್ಪ, ನಂಜುಂಡಸ್ವಾಮಿ, ಆರ್.ಎಸ್.ದೊಡ್ಡಿ, 9611719520 | ನಮ್ಮ ಬಡಾವಣೆಗೆ ನಿರಂತರ ಜ್ಯೋತಿ ವಿದ್ಯುತ್ ಸಂಪರ್ಕಕೊಡಿಸಿಕೊಡಿ ಎಂದು ಕೋರಿರುತ್ತಾರೆ. | ಹನೂರು ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಕ್ರಮವಹಿಸಲು ತಿಳಿಸಲಾಯಿತು. |
| 11 | ಆರ್.ಎಸ್.ದೊಡ್ಡಿ ಗ್ರಾಮಸ್ಥರು | ಮುದ್ದಪ್ಪ ಟಿ.ಸಿ.ಯಲ್ಲಿ ಪದೇ ಪದೇ ಎಲ್.ಟಿ. ವೈರ್‌ಗಳು ತುಂಡಾಗುತ್ತಿದ್ದು ಇದರಿಂದ ಮುಂದಾಗುವ ಅನಾಹುತಗಳನ್ನು ತಪ್ಪಿಸಲು ಹೊಸದಾಗಿ ವೈರ್‌ಗಳನ್ನು ಹಾಕಲು ಕೋರಿರುತ್ತಾರೆ. | ಹನೂರು ಶಾಖಾಧಿಕಾರಿಗಳಿಗೆ ಈ ಕೂಡಲೇ ಸ್ಥಳ ಪರಿಶೀಲಿಸಿ ವರದಿ ನೀಡಲು ಮತ್ತು ಸೂಕ್ತ ಕ್ರಮಕೈಗೊಳ್ಳಲು ಸೂಚಿಸಲಾಯಿತು. |
| 12 | ಸಾರ್ವಜನಿಕರು, ಶ್ರೀ.ಆಂಜನೇಯ ದೇವಸ್ಥಾನ ಬೀದಿ, ಹನೂರು ಪಟ್ಟಣ | ಆಂಜನೇಯ ದೇವಸ್ಥಾನ ಬೀದಿಯಲ್ಲಿರುವ 100ಕೆವಿಎ ಪರಿವರ್ತಕವು ಬೀದಿಯ ಮಧ್ಯ ಭಾಗದಲ್ಲಿದ್ದು ದೇವಸ್ಥಾನಕ್ಕೆ ಹೆಚ್ಚು ಜನರು ಬರುತ್ತಿರುವ ಕಾರಣ ತೊಂದರೆಯಾಗುತ್ತಿದ್ದು ಸ್ಥಳಾಂತರಿಸಲು ಕೋರಿರುತ್ತಾರೆ. | ಹನೂರು ಶಾಖಾಧಿಕಾರಿಗಳಿಗೆ ಕೂಡಲೇ ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. |
| 13 | ಸಿ.ಜೋಸೆಫ್ ಬಿನ್ ಪೌತಿಚೌರಿಮುತ್ತು, 85 ಅರಬಗೆರೆ ಗ್ರಾಮ,9449993494 | H2IP-2292, IP SET ಗೆ ವಿದ್ಯುತ್ ಸಂಪರ್ಕದ ತೊಂದರೆಯಿದ್ದು ಇಲಾಖೆಗೆ ಭದ್ರತಾ ಠೇವಣಿ ಪಾವತಿಸಿದ್ದು ಇದನ್ನು ಸರಿಪಡಿಸಿಕೊಡಿ ಎಂದು ಕೋರಿರುತ್ತಾರೆ. | ಲೊಕ್ಕನಹಳ್ಳಿ ಶಾಖಾಧಿಕಾರಿಯವರಿಗೆ ಸೂಕ್ತ ಕ್ರಮಕೊಂಡು ವಿದ್ಯುತ್ ಸಂಪರ್ಕ ನೀಡಲು ತಿಳಿಸಲಾಯಿತು. |
| 14 | ಡಿ.ಕುಮಾರ್, ವಿ.ಎಸ್.ದೊಡ್ಡಿ | ಮನೆಗೆ ನೀಡಿರುವ ವಿದ್ಯುತ್ ಸಂಪರ್ಕವನ್ನು ತೋಟದ ಲೈನ್‌ನಿಂದ ಊರಿನ ಲೈನ್ ಬದಲಾಯಿಸಲು ಕೋರಿರುತ್ತಾರೆ. | ಲೊಕ್ಕನಹಳ್ಳಿ ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಇಲಾಖಾ ನಿಯಮಾನುಸಾರ ಕ್ರಮವಹಿಸಲು ಸೂಚಿಸಲಾಯಿತು. |

| | | | |
|---|---|---|---|
| 15 | ಡಿ.ವಿಲೇಜ್, ಎಲ್.ಪಿ.ಎಸ್. ಪ್ರಾಜೆಕ್ಟ್, ಗ್ರಾಮಸ್ಥರು | 100ಕೆವಿಎ ಪರಿವರ್ತಕಕ್ಕೆ ಊರು ಮತ್ತು ಐಪಿ ಸೆಟ್‌ಗಳು ಸೇರಿದ್ದು ಅಲ್ಯೂಮಿನಿಯಂ ವೈರ್‌ಗಳನ್ನು ಅಳವಡಿಸಿರುವ ಕಾರಣ ವೋಲ್ಟೇಜ್ ಸಮಸ್ಯೆ ಇರುವ ಕಾರಣ ವಾಹಕವನ್ನು ಬದಲಾಯಿಸಲು ಕೋರಿರುತ್ತಾರೆ. | ಕೌದಳ್ಳಿ ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಇಲಾಖಾ ನಿಯಮಾನುಸಾರ ಕ್ರಮವಹಿಸಲು ಸೂಚಿಸಲಾಯಿತು. |
| 16 | ಗ್ರಾಮಸ್ಥರು, ದಂಟಳ್ಳಿ | ದಂಟಳ್ಳಿ ಊರಿನ ಎಸ್.ಟಿ. ಕಾಲೋನಿಯಲ್ಲಿ ವಾಹಕವು ಅಲ್ಯೂಮಿನಿಯಂ ಆಗಿದ್ದು ಬದಲಾಯಿಸಲು ಕೋರಿರುತ್ತಾರೆ. | ಕೌದಳ್ಳಿ ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಇಲಾಖಾ ನಿಯಮಾನುಸಾರ ಕ್ರಮವಹಿಸಲು ಸೂಚಿಸಲಾಯಿತು. |
| 17 | ಅಜ್ಜೀಪುರ ಗ್ರಾಮಸ್ಥರು | 100ಕೆವಿಎ ಐ.ಪಿ. ಸೆಟ್‌ನಲ್ಲಿ 20ಕ್ಕೂ ಹೆಚ್ಚು ಐ.ಪಿ. ಸೆಟ್‌ಗಳಿದ್ದು ಎಲ್ಲದಕ್ಕೂ ಆರ್.ಆರ್.ನಂ.ಗಳಿದ್ದು ಹೆಚ್ಚುವರಿಯಾಗಿ ಒಂದು ಪರಿವರ್ತಕವನ್ನು ಹಾಕಲು ಕೋರಿರುತ್ತಾರೆ. | ರಾಮಾಪುರ ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮವಹಿಸಲು ತಿಳಿಸಲಾಯಿತು. |

ಮೇಲ್ಕಂಡ ದಿನಾಂಕದಂದು ಜನ ಸಂಪರ್ಕ ಸಭೆಯಲ್ಲಿ ಚರ್ಚಿಸಿದ ವಿಷಯಗಳ ವಿವರಗಳನ್ನು ತಮ್ಮ ಅವಗಾಹನೆಗೆ ಹಾಗೂ ಮುಂದಿನ ಕ್ರಮಕ್ಕೆ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ., ಉಪವಿಭಾಗ, ಹನೂರು.

**ಪ್ರತಿಗಳನ್ನು:**

1. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾವಿಸನಿನಿ, ವಿಭಾಗ ಕಛೇರಿ, ಕೊಳ್ಳೇಗಾಲ,ರವರ ಮಾಹಿತಿಗೆ ಸಲ್ಲಿಸಲಾಗಿದೆ.
2. ಶಾಖಾಧಿಕಾರಿಗಳು, ಹನೂರು/ಲೊಕ್ಕನಹಳ್ಳಿ/ರಾಮಾಪುರ/ಕೌದಳ್ಳಿ/ಮಹದೇಶ್ವರ ಬೆಟ್ಟ, ಶಾಖೆ, ರವರು ಜನ ಸಂಪರ್ಕ ಸಭೆಯಲ್ಲಿ
   ಚರ್ಚಿತವಾದ ದೂರಗಳಿಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿಯನ್ನು 07 ದಿನಗಳ ಒಳಗಾಗಿ ಸಲ್ಲಿಸಲು ಸೂಚಿಸಲಾಗಿದೆ.
3. ಸ.ಇಂ(ತಾಂ)/ಕಛೇರಿ ಕಡತಕ್ಕೆ.